S.C. 67/2021

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

## ಸತ್ರ ಮೊಕದ್ದಮೆ ಸಂಖ್ಯೆಃ 67/2021

| | | | |
|---|---|---|---|
| ಹೆಸರು | : | ಪುಂಡಲೀಕ ಪಟಾತರ | ಫ್ರಾಸಾ-12 |
| ಗಂಡನ ಹೆಸರು | : | ಮಾರುತಿ | ಚಾಸಾ-23 |
| ವಯಸ್ಸು | : | 51 ವರ್ಷ | |
| ಉದ್ಯೋಗ | : | ಸಿ.ಪಿ.ಐ ದೇವದುರ್ಗ ಗ್ರಾಮೀಣ ಠಾಣೆ. | |
| ವಾಸಸ್ಥಳ | : | ದೇವದುರ್ಗ | |

ದಿನಾಂಕಃ 25-07-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ನಾನು ದಿನಾಂಕ: 06-08-2018 ರಿಂದ 30-06-2020 ರವರೆಗೆ ಪಿ.ಎಸ್.ಐ ಅಂತಾ ಹುನಗುಂದ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ: 06-08-2018 ರಂದು ಚಾಸಾ-22 ರವರಿಂದ ಮುಂಜನ ತನಿಖೆಯನ್ನು ಪಡೆದು ಪರಿಶೀಲಿಸಿ ದಿನಾಂಕ: 06-02-2020 ರಂದು ಮುನ್ಸಿಪಾಲ್ಟಿಯಿಂದ ಶಿವಗಂಗಾ ಲಾಡ್ಜಿನ ಉತಾರ ಪಡೆದಿದ್ದೇನೆ. ಅದನ್ನು ನಿಪಿ-18 ಎಂದು, ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-20 ರವರಿಂದ ಮರಣದ ಕುರಿತು ಅಂತಿಮ ವರದಿಯನ್ನು ಪಡೆದಿದ್ದೇನೆ. ಅದನ್ನು ಈಗಾಗಲೇ ನಿಪಿ-17 ಎಂದು ಗುರುತಿಸಲಾಗಿದ್ದು, ಸಹಿಯನ್ನು ನಿಪಿ-17(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಎಫ್.ಎಸ್.ಎಲ್ ವರದಿಯನ್ನು ಬಾಕಿ ಇಟ್ಟು ದೋಷಾರೋಪಣಾ ಪಟ್ಟಿಯನ್ನು ತಯಾರಿಸಿದ್ದೇನೆ.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಆರ್. ಎಮ್. ಜೆ ವಕೀಲರಿಂದ.**

ಮೃತ ಪ್ರಭಾಕರ ಜೀವಂತವಿದ್ದಾಗ ಸಾಲ ಮಾಡಿದ ಬಗ್ಗೆ ದಾಖಲೆ ಪಡೆದಿಲ್ಲ. ಅವನ ಹೆಸರಿನಲ್ಲಿ ಎಷ್ಟು ಲಾರಿಗಳಿದ್ದವು ಎಂದು ದಾಖಲೆ ಪಡೆದುಕೊಂಡಿರುವುದಿಲ್ಲ. ಆರೋಪಿ ಹಾಗೂ ಮೃತ ಪ್ರಭಾಕರ ಪಾಲುದಾರರು ಎಂದು ತೋರಿಸಲು ಪಾಲು ಪತ್ರ ಹಾಜರುಪಡಿಸಿರುವುದಿಲ್ಲ. ಆರೋಪಿ ಯಾರ ಕಡೆಯಿಂದ ಹಾಗೂ ಯಾವ ಬ್ಯಾಂಕಿನಿಂದ ಎಷ್ಟು ಸಾಲ ಪಡೆದಿದ್ದ ಎನ್ನುವ ಬಗ್ಗೆ ದಾಖಲೆ ಪಡೆದುಕೊಂಡಿರುವುದಿಲ್ಲ. ಆರೋಪಿ ಹಾಗೂ ಪ್ರಭಾಕರ ಇವರ ಟ್ರ್ಯಾವೆಲ್ಸ್ ಎಜೆನ್ಸಿಯ್ ಆಡಿಟ್ ವರದಿ ಪಡೆದಿಲ್ಲ. ಸದರಿ ಎಜೆನ್ಸಿಯಿಂದ ಬಂದಿರುವ ಲಾಬ ಹಾಗೂ ಹಾನಿಯ ಬಗ್ಗೆ ದಾಖಲೆ ಪಡೆದಿಲ್ಲ.

ಲಾಡ್ಜಿನ ಲಾಕ್ ಬಾಗಿಲನ್ನು ಲಾಡ್ಜಿನ ಕೆಲಸಗಾರರು ತೆಗೆದಿರುವುದು ಕಡತದಲ್ಲಿ ಕಂಡು ಬಂದಿದೆ. ಡೆತ್ ನೋಟನ್ನು ಎಫ್.ಎಸ್.ಎಲ್ ಗೆ ಚಾಸಾ-20 ರವರು ಕಳುಹಿಸಿರುತ್ತಾರೆ. ನಿಪಿ-2 ರಿಂದ 10 ಪೋಟೋಗಳಲ್ಲಿ ಡೆತ್ ನೋಟ್ ಬಗ್ಗೆ ಕಂಡುಬರುದಿಲ್ಲ ಎಂದರೆ ಸರಿ. ಪಿರ್ಯಾದಿ ಕೊಡುವ ಸಮಯದಲ್ಲಿ ಡೆತ್ ನೋಟ್ ಹಾಜರುಪಡಿಸಿದ್ದಾರೆ ಎಂದರೆ ಸರಿ. ಡೆತ್ ನೋಟಿನಲ್ಲಿ ಇನ್ನಿತರ ಸಾಲಗಾರರು ಎಂದು ನಮೂದಿಸಿದ್ದು, ಅವರು ಯಾರು ಎಂದು ತನಿಖೆ ಮಾಡಿಲ್ಲ. ಡೆತ್ ನೋಟ್ ಜೊತೆಗೆ ಪೆನ್ ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಮೃತ ಪ್ರಭಾಕರ ತನ್ನ ಜೇಬಿನಲ್ಲಿ ಅಥವಾ ಬ್ಯಾಗಿನಲ್ಲಿ ಅಥವಾ ಲಾಡ್ಜಿನ ಕೋಣೆಯಲ್ಲಿ ಪೆನ್ ಇರುವುದನ್ನು ನೋಡಿಲ್ಲ ಹಾಗೂ ಜಪ್ತಿಪಡಿಸಿಕೊಂಡಿರುವುದಿಲ್ಲ. ನಿಪಿ-10 ಡೆತ್ ನೋಟ್ ಮೇಲಿನ ಸಹಿ ಹಾಗೂ ಲಾಡ್ಜಿನ ರಸೀದಿ ಮೇಲಿನ ಸಹಿ ಎರಡು ಬೇರೆ ಬೇರೆಯಾಗಿರುತ್ತವೆ ಎಂದರೆ ಸರಿ. ಈ ಎರಡು ಸಹಿಗಳನ್ನು ಎಫ್.ಎಸ್.ಎಲ್ ಗೆ ಕಳುಹಿಸಿರುವುದಿಲ್ಲ. ಸದರಿ ಲಾಡ್ಜಿನ ಮೂಲ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ಆದರೆ, ಜರಾಕ್ಸ್ ಪ್ರತಿಗೆ ಸಹಿ ಮಾಡಿ ಹಾಜರುಪಡಿಸಿದ್ದೇನೆ. ಡೆತ್ ನೋಟನ್ನು ಈ ಪ್ರಕರಣಕ್ಕೆ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಿಂದ 9 ಗಳ ಪೋಟೋಗಳ ಕುರಿತು 65 ಬಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ-18 ನ್ನು ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-20 ರವರು ಪಿ.ಎಮ್ ವರದಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ಮಾಡದೇ ಸುಳ್ಳು ದೋಷಾರೋಪಣೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

25-07-2026

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.